'ಹೌದು ಸಾರ್! ಯುವಕ ಐಸ್‌ಕ್ರೀಂ ತೆಗೆದುಕೊಳ್ಳಲು ನನ್ನ ಪಾರ್ಲರ್ ಬಳಿ ಬಂದ. ಎರಡು ಕಪ್ ಐಸ್‌ಕ್ರೀಂ ತೆಗೆದುಕೊಂಡ. ಅಷ್ಟರೊಳಗೇ ಭಾರಿ ಶಬ್ದ ಉಂಟಾಗಿ ಯುವಕ ಆತುರದಿಂದ ಅತ್ತ ಧಾವಿಸಿದ. ಆಗಲೇ ಯುವತಿ ಬೆಂಕಿ ಜ್ವಾಲೆಯಲ್ಲಿ ಉರಿಯುತ್ತಿದ್ದಳು. ಬೆಂಕಿ ಹೇಗೆ ಬಿತ್ತೊ ಏನೋ!?' ಸಣ್ಣಗಿನ ಧ್ವನಿಯಲ್ಲಿ ಹೇಳಿದ ಫಯಾಜ್.

ಐಸ್‌ಕ್ರೀಂ ಕೊಂಡುಕೊಳ್ಳುತ್ತಾ ಹೇಳಿದರು ರೆವರೆಂಡ್, 'ಬೆಂಕಿ ಹತ್ತಿಕೊಂಡಾಗ ಯುವತಿ ಏನಾದರೂ ಅರಚಿದಳಾ?'



ಅರ್ಥವಾಗದವರಂತೆ ನೋಡಿದ ಫಯಾಜ್, 'ಏನೋ ನಾನು ಅಷ್ಟಾಗಿ ಗಮನಿಸಲಿಲ್ಲ ಸಾರ್! ಶಬ್ದ ಮಾತ್ರ ಕೇಳಿಬಂತು. ಅಷ್ಟರಲ್ಲೇ ಕಾರಿನ ಸುತ್ತ ಜನರೆಲ್ಲಾ ಸೇರಿಬಿಟ್ಟಿದ್ದರು' ಎಂದ ಫಯಾಜ್.

ತಲೆ ತೂಗಿ ಐಸ್‌ಕ್ರೀಂ ತಿನ್ನುತ್ತಾ, ತಮ್ಮ ಕಾರಿನತ್ತ ನಡೆದರು ರೆವರೆಂಡ್.

★★★

'ಎಲ್ಲವೂ ವಿಚಿತ್ರವಾಗಿದೆ ಸಾರ್! ಯುವತಿ ತನ್ನಷ್ಟಕ್ಕೆ ತಾನು ಹತ್ತಿಕೊಂಡು ಉರಿಯುವುದೆಂದರೆ ಏನು!?' ದುಃಖಿಸುತ್ತಾ ಅಂದರು ಅಖಿಲಾ ತಂದೆ.

'ನಿಮ್ಮ ಮನೆಯಿಂದ ಇಬ್ಬರೂ ಎಷ್ಟು ಗಂಟೆಗೆ ಹೊರಟ್ಟಿದ್ದರು?'

'ಹುಡುಗ ಬೆಳಗ್ಗೆ 11 ಗಂಟೆಗೆ ಮನೆಗೆ ಬಂದ. ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡಿದೆವು. ಆನಂತರ ಮನೆಯಿಂದ ಹೊರಗೆ ಹೊರಟರು. ಅಂದರೆ ಸುಮಾರು ಎರಡು, ಎರಡೂವರೆ ಗಂಟೆಯಾಗಿರಬಹುದು.'

ಮನಸ್ಸಿನಲ್ಲೇ ರೆವರೆಂಡ್ ಲೆಕ್ಕಾಚಾರ ಹಾಕಿದರು, 'ಮನೆಯಿಂದ ಹೊರಟು ಎಷ್ಟು ಸಮಯದಲ್ಲಿ ಐಸ್‌ಕ್ರೀಂ ಪಾರ್ಲರ್ ಬಳಿಗೆ ಸೇರಿಕೊಳ್ಳಬಹುದು' ಎಂದು.

★★★

ಅಖಿಲೇಶ್ ರೆವರೆಂಡರತ್ತ ತಲೆ ಎತ್ತಿ ನೋಡಿದ. ಅವನ ಕಣ್ಣುಗಳು ಕೆಂಪಗಾಗಿವೆ. ಚೆನ್ನಾಗಿ ಎಣ್ಣೆ ಹಾಕಿದ್ದಾನೆ! 'ನೀನು ಅಖಿಲಾನ ಪ್ರೀತಿಸ್ತಿದ್ದೆ ಅಲ್ವಾ?' ಪ್ರಶ್ನಿಸಿದರು ರೆವರೆಂಡ್.